ಅಷ್ಟು ಚುರುಕಾಗಿ, ತೀಕ್ಷ್ಣವಾಗಿ ಅವರು ಮಾತನಾಡುತ್ತಾರೆ. ಅವರ ಮಾತು ಅಷ್ಟೇ ಗಂಭೀರತೆ ಯಲ್ಲಿರುತ್ತದೆ, ಅಷ್ಟೇ ಸಜ್ಜನಿಕೆಯಲ್ಲಿರುತ್ತದೆ. ಈ ಒಂದು ನಿರ್ಣಯದಿಂದ ಈ ಸಭೆಯು ಇತಿಹಾಸದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಲಿ. ನಾವೆಲ್ಲರೂ ಒಂದೇ ನಾಣ್ಯದ ಎರಡು ಮುಖಗಳೆಂದು ಕೆಲಸ ಮಾಡೋಣ. ಜನತೆ ನಮಗೆ ಬೇರೆ ಬೇರೆ ಪಾತ್ರವನ್ನು ವಹಿಸಿದೆ. ಬೇರೆ ಯಾವ ರಾಜ್ಯದಲ್ಲಿಯೂ ಬಹುಶಃ ನಾಲ್ಕು ವರ್ಷಗಳಲ್ಲಿ ಐದು ಸಾರ್ವತ್ರಿಕ ಚುನಾವಣೆ ಆದಂಶಹ ಉದಾಹರಣೆಗಳು ಇಲ್ಲ. ೧೯೫೫ರಲ್ಲಿ ಈ ಮನೆಗೆ ಚುನಾವಣೆ ನಡೆಯಿತು. ೧೯೫೪ರಲ್ಲಿ ಲೋಕಸಭೆಗೆ ಚುನಾವಣೆ ನಡೆಯಿತು. ಆಮೇಲೆ ೧೯೫೫ರಲ್ಲಿ ಪುನಃ ಈ ಮನೆಗೆ ಚುನಾವಣೆ ನಡೆಯಿತು. ೧೯೮೬ರಲ್ಲಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆಗಳು ನಡೆದಿವೆ.

ಶ್ರೀ ಎನ್. ಎಂ. ಅಡ್ಯಂತಾಯ.—ಸರ್ಕಾರದ ಬೊಕ್ಕಸದ ಹಣವೆಲ್ಲಾ ಚುನಾವಣೆಗೆ ಖಾಲಿ ಯಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗೇನೂ ಇಲ್ಲ. ಹೀಗೆ ಬರತಕ್ಕ ಕಾಲದಲ್ಲಿ ನಾವು ಕುಳಿತು ನಮ್ಮ ರಾಜ್ಯದ ಅಭಿವೃದ್ಧಿಯ ಕಡೆಗೆ ಲಕ್ಷ್ಯ ಹಾಕೋಣವೆಂದು ಹೇಳಿ ಹೃತ್ಪೂರ್ವಕವಾಗಿ ಪಕ್ಷದ ಪರವಿಯಿಂದ ಮತ್ತು, ಈ ಸಭೆಯ ವತಿಯಿಂದ ನಮ್ಮ ವಿರೋಧ ಪಕ್ಷದ ನಾಯಕರನ್ನು ಅಭಿನಂದಿಸುತ್ತೇನೆ.

ಪ್ರಕಟಣೆ ೨

ಅಧ್ಯಕ್ಷರು.—ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮದ ಪ್ರಕಾರ ನಾನು ಈ ಕೆಳಕಂಡ ೬ ಜನ ಅಧ್ಯಕ್ಷತೆ ವಹಿಸುವ ಸದಸ್ಯರುಗಳ ಪಟ್ಟಿಯಲ್ಲಿ ಸೇರಿಸಿ ಅವರನ್ನು ನಾಮನಿರ್ದೇಶನ ಮಾಡಿರುತ್ತೇನೆ.

ಶ್ರೀಯುತರುಗಳಾದ:—

೧. ಎಂ. ಪಿ. ಪ್ರಕಾಶ್
೨. ವೈ. ಕೆ. ರಾಮಯ್ಯ
೩. ಡಾ॥ ಎ. ಪುಷ್ಪಾವತಿ
೪. ಮಹಮದ್ ಲೈಕುದ್ದೀನ್
೫. ಚಂದ್ರಕಾಂತ ಜಿ. ಬಿಲ್ಲವ್
೬. ಶ್ರೀಮತಿ ಮನೋರಮ ಮಧ್ವರಾಜ್

ಸಂತಾಪ ಸೂಚನೆಗಳು

ಅಧ್ಯಕ್ಷರು.—ಈಗ ಸಂತಾಪ ಸೂಚನೆಗಳು. ಈ ಕೆಳಕಂಡ ವ್ಯಕ್ತಿಗಳು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

೧. ಮಾಜಿ ಶಾಸಕರಾದ ಶ್ರೀ ಪಯಾನಂದ ಕಲ್ಲೆ ಇವರು ದಿನಾಂಕ ೮-೨-೧೯೮೬ ರಂದು ನಿಧನರಾದರು. ಶ್ರೀಯುತರು ೧೯೬೨ ರಿಂದ ೧೯೭೧ ರವರೆಗೆ ವಿಧಾನ ಸಭೆಯ ಸದಸ್ಯರಾಗಿದ್ದರು.

೨. ಮಾಜಿ ಶಾಸಕರಾದ ಶ್ರೀ ಜೆ. ಎಂ. ಮಂಜುನಾಥಯ್ಯ ಇವರು ದಿನಾಂಕ ೧೦-೧೨-೧೯೮೬ ರಂದು ನಿಧನರಾದರು. ಶ್ರೀಯುತರು ೧೯೫೬ ರಿಂದ ೧೯೫೭ರ ವರೆಗೆ ಮತ್ತು ೧೯೭೧ರ ವರೆಗೆ ವಿಧಾನಸಭಾ ಸದಸ್ಯರಾಗಿದ್ದರು.

೩. ಮಾಜಿ ಶಾಸಕರಾದ ಶ್ರೀ ದೇವೇಂದ್ರಪ್ಪ ಘಾಳಪ್ಪ ಇವರು ದಿನಾಂಕ ೧೪-೧೨-೧೯೮೬ ರಂದು ನಿಧನರಾದರು. ಶ್ರೀಯುತರು ೧೯೭೨ರಿಂದ ೧೯೮೪ರ ವರೆಗೆ ಸತತವಾಗಿ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ೧೯೭೨ರಲ್ಲಿ ಯೋಜನಾ ಮತ್ತು ವಾರ್ತಾ ರಾಜ್ಯ ಮಂತ್ರಿಗಳಾಗಿ, ೧೯೭೩ರಲ್ಲಿ ಆರೋಗ್ಯ ರಾಜ್ಯ ಮಂತ್ರಿಗಳಾಗಿ, ೧೯೭೪ರಲ್ಲಿ ಪಶುಸಂಗೋಪನಾ ರಾಜ್ಯ ಮಂತ್ರಿಗಳಾಗಿ, ೧೯೭೬ರಲ್ಲಿ ಭೂ ಸುಧಾರಣಾ ಮತ್ತು ಮಿನುಗಾರಿಕಾ ಮತ್ತು ಡೈರಿ ಅಭಿವೃದ್ಧಿಯ ರಾಜ್ಯ ಮಂತ್ರಿಗಳಾಗಿದ್ದರು. ೧೯೭೯ರಲ್ಲಿ ಲೋಕೋಪಯೋಗಿ ಮಂತ್ರಿಗಳಾಗಿದ್ದರು. ಹೀಗೆ ಮಾನ್ಯರು ಹಲವಾರು ಖಾತೆಗಳಲ್ಲಿ ಮಂತ್ರಿಗಳಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೪. ಮಾಜಿ ಶಾಸಕರಾದ ಶ್ರೀ ಹಂಜೆ ವಿಷ್ಣಣ್ಣ ಇವರು ದಿನಾಂಕ ೧೫-೧೨-೧೯೮೬ ರಂದು ನಿಧನರಾದರು. ಶ್ರೀಯುತರು ೧೯೬೭ ರಿಂದ ೧೯೭೧ರ ವರೆಗೆ ಮತ್ತು ೧೯೭೨ ರಿಂದ ೧೯೭೮ರ ವರೆಗೆ ವಿಧಾನ ಸಭಾ ಸದಸ್ಯರಾಗಿದ್ದರು.

೫. ಮಾಜಿ ಶಾಸಕರಾದ ಶ್ರೀ ಆರ್. ಜಿ. ಪಾಲಿ ಇವರು ದಿನಾಂಕ ೧೫-೧೨-೧೯೮೬ ರಂದು ನಿಧನರಾದರು. ಮಾನ್ಯರು ೧೯೬೮ ರಿಂದ ೧೯೭೧ರ ವರೆಗೆ ವಿಧಾನ ಸಭಾ ಸದಸ್ಯರಾಗಿದ್ದರು. ಅಲ್ಲದೆ ವಿವಿಧ ಸಂಘ ಸಂಸ್ಥೆಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೬. ಮಾಜಿ ಶಾಸಕರಾದ ಶ್ರೀ ಅಪ್ಪಾಜಿ ಇವರು ದಿನಾಂಕ ೪-೧-೧೯೮೭ ರಂದು ನಿಧನರಾದರು. ಶ್ರೀಯುತರು ೧೯೭೮ ರಿಂದ ೧೯೮೩ರ ವರೆಗೆ ವಿಧಾನ ಸಭಾ ಸದಸ್ಯರಾಗಿದ್ದರು.

೭. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಆರ್. ರಂಗಪ್ಪರೆಡ್ಡಿಯವರು ದಿನಾಂಕ ೨೦-೧-೧೯೮೭ ರಂದು ನಿಧನರಾದರು. ಶ್ರೀಯುತರು ೧೯೪೫ ರಿಂದ ೧೯೫೯ ವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರುಗಳ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಇನ್ನು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ನಮೂದಿಸಿರುವ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

I. ಅ. ಭಾರತದ ಸಂವಿಧಾನದ ಅನುಚ್ಛೇದ ೨೫೩ (ಎ)ರ ಅಡಿಯಲ್ಲಿ.—

೧) ೧೯೮೬ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ಅಧ್ಯಾದೇಶ.
೧೯೫೯ನೇ ಇಸವಿಯ ಕರ್ನಾಟಕ ಲೋಕಸೇವಾ ಆಯೋಗ (ಕಾರ್ಯನಿರ್ವಹಣೆ ಹಾಗೂ ಹೆಚ್ಚುವರಿ ಕಾರ್ಯಗಳು) ಶಾಸನದ ೧೮ನೇ ಕಲಮಿನ ಮೂರನೇ ಉಪಕಲಮಿನ ಮೇರೆಗೆ.—

೨) ಅಧಿಸೂಚನೆ ಕ್ರಮಾಂಕ ಡಿಪಿಎಆರ್ ೪೪ ಎಸ್‌ಎಸ್‌ಪಿ ೮೫, ದಿನಾಂಕ ೧೯ನೇ ಏಪ್ರಿಲ್, ೧೯೮೪.
೧೯೮೪ನೇ ಇಸವಿಯ ಕರ್ನಾಟಕ ಲೋಕಸೇವಾ ಆಯೋಗ (ಕಾರ್ಯಗಳು) (ತಿದ್ದುಪಡಿ) ನಿಯಮಗಳು.

ಭಾರತದ ಸಂವಿಧಾನದ ಅನುಚ್ಛೇದ ೩೫೩ (೨)ರ ಅಡಿಯಲ್ಲಿ.—

೩) ಕರ್ನಾಟಕ ಲೋಕಸೇವಾ ಆಯೋಗದ ೧೯೮೫-೮೪ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.
೧೯೫೯ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆಯ ೫೯ನೇ ಕಲಮಿನ ಮೇರೆಗೆ.—

೪) ೧೦.೦೦ ರೂ. ಗಳಿಗಿಂತ ಕಡಿಮೆ ಬೆಲೆಯ ಪೆನ್‌ಗಳು ಮತ್ತು ಬಾಲ್ ಪೆನ್‌ಗಳು ಹಾಗೂ ೫೦.೦೦ ರೂಪಾಯಿಗಳಿಗಿಂತ ಕಡಿಮೆ ಬೆಲೆಯ ಶಾಲಾ ಮಕ್ಕಳ ಚೀಲಗಳಿಗೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡುವ ಬಗ್ಗೆ ದಿನಾಂಕ ೭ನೇ ಆಗಸ್ಟ್, ೧೯೮೬ ರಂದು ಹೊರಡಿಸಿದ ಎಫ್‌ಡಿ ೬೯ ಸಿಎಸ್‌ಎಲ್ ೮೬ನೇ ಕ್ರಮಾಂಕದ ಅಧಿಸೂಚನೆ.

೫) ೧೯೮೬ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ನಿಯಮದ ಬಗ್ಗೆ ದಿನಾಂಕ ೧೯ನೇ ಆಗಸ್ಟ್ ೧೯೮೬ರಂದು ಹೊರಡಿಸಲಾದ ಎಫ್‌ಡಿ ೬೪ ಸಿಎಸ್‌ಎಲ್ ೮೬ನೇ ಕ್ರಮಾಂಕದ ಅಧಿಸೂಚನೆ.